# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **617** |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕ.ವಿ.ಪ್ರ.ನಿ.ನಿ.ಯಲ್ಲಿ ರೂಪಿಸಿ ಕೊಂಡಿರುವ ಆರ್. ಅಂಡ್ ಪಿ. ನಿಯಮಗಳಲ್ಲಿ ಪದವೀಧರ ಸಹಾಯಕ ಅಭಿಯಂತರರು (ವಿ) ರವರುಗಳಿಗೆ ಪದೋನ್ನತಿಯನ್ನು ಎಷ್ಟು ವರ್ಷಕ್ಕೊಮ್ಮೆ ಮತ್ತು ಯಾವ ಪ್ರತಿಶತದಲ್ಲಿ ನೀಡಲು ನಿಯಮ ರೂಪಿಸಲಾಗಿದೆ; ಈ ನಿಯಮಗಳಂತೆ 14 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿರುವ 267 ಪದವೀಧರ ಸಹಾಯಕ ಅಭಿಯಂತರರು (ವಿ) ರವರುಗಳಿಗೆ ಪದೋನ್ನತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಆರ್ & ಪಿ ನಿಯಮಾವಳಿಗಳ ಅನ್ವಯ ಸಹಾಯಕ ಅಭಿಯಂತರರಿಗೆ ಆರು ತಿಂಗಳಿಗೊಮ್ಮೆ ಪದೋನ್ನತಿ ಸಮಿತಿ ಸಭೆಯನ್ನು ನಡೆಸಬೇಕಾಗಿರುತ್ತದೆ. ನಿಗಮದಲ್ಲಿನ ಒಟ್ಟು ಮಂಜೂರಾಗಿರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹುದ್ದೆಗಳಲ್ಲಿ ಶೇಕಡಾ 60 ರಷ್ಟು ಹುದ್ದೆಗಳನ್ನು ಸಹಾಯಕ ಇಂಜಿನಿಯರ್ (ವಿ) (ಪದವೀಧರರು) ಹುದ್ದೆಯಿಂದ ಭರ್ತಿ ಮಾಡಲಾಗುತ್ತದೆ. |
| ಆ) | ಬಂದಿದ್ದಲ್ಲಿ, ಅರ್ಹರಿರುವ ಪದವೀಧರ ಸಹಾಯಕ ಅಭಿಯಂತರರು (ವಿ) ರವರುಗಳಿಗೆ ಯಾವ ಕಾಲಮಿತಿಯೊಳಗೆ ಪದೋನ್ನತಿ ನೀಡಲು ಸರ್ಕಾರ ಕ್ರಮ ವಹಿಸುವುದು; (ಸಂಪೂರ್ಣ ವಿವರ ನೀಡುವುದು) | ಪ್ರಸ್ತುತ, ಸಹಾಯಕ ಇಂಜಿನಿಯರ್(ವಿ) (ಪದವೀಧರರು) ಹುದ್ದೆ ಹಾಗೂ ಮೇಲ್ಪಟ್ಟ ಹುದ್ದೆಗಳ ಪದೋನ್ನತಿಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 12567/2020 ರ ಪ್ರಕರಣದಲ್ಲಿ ದಿನಾಂಕ 27.03.2023 ರಂದು ನೀಡಲಾದ ಆದೇಶದಲ್ಲಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವವರೆವಿಗೂ ಯಾವುದೇ ಪದೋನ್ನತಿಯನ್ನು ನೀಡಬಾರದೆಂದು ಸೂಚಿಸಿರುತ್ತದೆ.<br>ಮುಂದುವರೆದು, ಜೇಷ್ಠತೆಗೆ ಸಂಬಂಧಿಸಿದಂತೆ ರಿಟ್ ಅಪೀಲ್ ಸಂಖ್ಯೆ 360/2021, 362/2021, 364/2021 ಹಾಗೂ 488/2021 ರ ಪ್ರಕರಣಗಳು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.<br>ಆದುದರಿಂದ, ಸಹಾಯಕ ಇಂಜಿನಿಯರ್(ವಿ) (ಪದವೀಧರರು) ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) (ಪದವೀಧರರು) ಹುದ್ದೆಗೆ ಪದೋನ್ನತಿ ನೀಡಿರುವುದಿಲ್ಲ. |

| | | |
|---|---|---|
| ಇ) | ಕ.ವಿ.ಪ್ರ.ನಿ.ನಿ. ಯಲ್ಲಿ ಡಿಪ್ಲೋಮ ಮತ್ತು ಪದವೀಧರ ಅಭಿಯಂತರರ ನೇಮಕ ಮತ್ತು ಪದೋನ್ನತಿಯಲ್ಲಿ ಇರುವ ತಾರತಮ್ಯಗಳನ್ನು ಸರಿಪಡಿಸುವಂತೆ ಸರ್ಕಾರಕ್ಕೆ ಸ್ವೀಕೃತವಾಗಿರುವ ಮನವಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಪದೋನ್ನತಿ ಮತ್ತು ಸೇವಾ ಹಿರಿತನಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ಪ್ರಕರಣಗಳು ಬಾಕಿ ಇರುವ ಹಿನ್ನಲೆಯಲ್ಲಿ ಸ್ವೀಕೃತವಾಗಿರುವ ಮನವಿಗಳನ್ನು ವಿಲೇವಾರಿ ಮಾಡಲು ಸಾಧ್ಯವಾಗಿರುವುದಿಲ್ಲ. |

ಸಂಖ್ಯೆ: ಎನರ್ಜಿ 190 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು